# <u>ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಸೇಡಂ.</u>

## <u>ಸಿಸಿ ನಂ.1824/2022</u>

ಫಿರ್ಯಾದಿಃ ಕರ್ನಾಟಕ ಸರಕಾರ ಪರಃ ಸೇಡಂ ಪೊಲೀಸ್ ಠಾಣೆ,

-ಃಃ ವಿರುದ್ಧ ಃಃ-

ಆರೋಪಿ ನಂಃ 1. ವಸೀಮ ತಂದೆ ಸೈಯದ ನಸೀರ
ವಃ 32 ವರ್ಷ, ಉಃ ಹೋಟೇಲ ಕೆಲಸ,
ಸಾಃ ರಹಮತ ನಗರ ಸೇಡಂ ,
ತಾಃ ಸೇಡಂ, ಜಿಃ ಕಲಬುರಗಿ.

2. ಆಮೇರ ತಂದೆ ಸೈಯದ ನಸೀರ
ವಃ 24 ವರ್ಷ, ಉಃ ಎ.ಸಿ. ಮೆಕ್ಯಾನಿಕ
ಸಾಃ ರಹಮತ ನಗರ ಸೇಡಂ,
ತಾಃ ಸೇಡಂ, ಜಿಃ ಕಲಬುರಗಿ

3. ಅಬ್ಬು @ಅಬ್ಬುಬಕರ ತಂದೆ ಎಮ್.ಡಿ. ಮುಸ್ತಾಫ ಕಲಕಂಬಾ
ವಃ 28 ವರ್ಷ, ಉಃ ಡ್ರೈವರ ಕೆಲಸ,
ಸಾಃ ರಹಮತನಗರ ಸೇಡಂ

4. ಸೈಯದ ಇಸ್ಮಾಯಿಲ ತಂದೆ ಸೈಯದ ಯುಸೂಫ
ವಃ 20 ವರ್ಷ, ಉಃ ಟೈಯರ ಪಂಕ್ಚರ ರಿಪೇರಿ ಕೆಲಸ
ಸಾಃ ಶಾಸ್ತ್ರೀ ನಗರ ಸೇಡಂ
ತಾಃ ಸೇಡಂ , ಜಿಃ ಕಲಬುರಗಿ

5. ಎಮ.ಡಿ.ಆಸೀಪ ತಂದೆ ತಾಜೋದ್ದಿನ ಬಾಬಾ
ವಃ 19 ವರ್ಷ, ಉಃ ಕೂಲಿ ಕೆಲಸ
ಸಾಃ ಗಣೇಶ ನಗರ ಸೇಡಂ
ತಾಃ ಸೇಡಂ

6. ಅಬ್ಬಾಸ ತಂದೆ ರಫೀಕ
ವಃ 25 ವರ್ಷ, ಉಃ ಟೈಯರ ಪಂಕ್ಚರ ಕೆಲಸ
ಸಾಃ ರಹಮತ ನಗರ ಸೇಡಂ , ತಾಃ ಸೇಡಂ

7. ಶೇಖ ಅಕ್ರಮ ತಂದೆ ಶೇಖ ಗೌಸ
ವಃ 29 ವರ್ಷ , ಉಃ ವ್ಯಾಪಾರ ,
ಸಾಃ ರೈಲ್ವೆ ಕ್ವಾರ್ಟರ್ಸ ಸೇಡಂ ಹಾ.ವ. ಮಹಾತ್ಮ ಗಾಂದಿ
ಕಾಲೋನಿ ಸೇಡಂ ಜಿಃ ಕಲಬುರಗಿ

8. ಇಬ್ರಾಹಿಂ ತಂದೆ ಅಕ್ಬರ
ವಃ 23 ವರ್ಷ, ಉಃ ಸೆಂಟ್ರಿಂಗ ಕೆಲಸ

ಸಾಃ ರಹಮತ ನಗರ ಸೇಡಂ
ತಾಃ ಸೇಡಂ, ಜಿಃ ಕಲಬುರಗಿ .

----

## ದೋ ಷಾ ರೋ ಪ ಣೆ

ನಾನು ಶ್ರೀ ಬಾಲು, ಬಿ.ಎ.,ಎಲ್.ಎಲ್.ಬಿ., ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರು, ಸೇಡಂ, ನಿಮ್ಮ ಮೇಲೆ ಹೊರಿಸುವ ಆರೋಪವೇನೆಂದರೆ,

ದಿನಾಂಕ 02- 06-2022 ರಂದು ರಾತ್ರಿ 00-30 ಎ.ಎಮ್.ಗಂಟೆ ಸುಮಾರಿಗೆ ಸೇಡಂ ಪೋಲೀಸ ಠಾಣೆಯ ವ್ಯಾಪ್ತಿಯಲ್ಲಿ ಬರುವ ಸೇಡಂ ಪಟ್ಟಣದ ಸ್ವಾಮಿ ವಿವೇಕಾನಂದ ಶಾಲೆಯ ಹಿಂದುಗಡೆ ರೋಡಿನ ಮೇಲೆ ಚಾಸಾ 1 ಮತ್ತು 4 ನೇದ್ದವರು ಮೆಕ್ಯಾನಿಕ ಕೆಲಸ ಮುಗಿಸಿಕೊಂಡು ಮನೆಗೆ ಹೋಗುವಾಗ ಆರೋಪಿತರು ತಮ್ಮ ಏಕೋದ್ದೇಶವನ್ನು ಈಡೇರಿಸಿಕೊಳ್ಳುವುದರ ಸಲುವಾಗಿ ಹಿಂದಿನ ಜಗಳದ ವೈಷಮ್ಯದಿಂದ ಜಗಳ ತೆಗೆದು ಅವರಲ್ಲಿಯ ಆರೋಪಿ 1 ನೇದ್ದವನು ಚಾಸಾ 1 ನೇದ್ದವನಿಗೆ ಜಗಳ ತೆಗೆದು ಅವಾಚ್ಯ ಶಬ್ದಗಳಿಂದ ಬೈಯುತ್ತಾ ಜಗಳ ತೆಗೆದು ಸಾರ್ವಜನಿಕ ಶಾಂತಿ ಭಂಗ ಉಂಟುಮಾಡಿರುತ್ತಾರೆ ಆ ಮೂಲಕ ಆರೋಪಿತರಾದ ನೀವು ಭಾ.ದಂ.ಸಂ. ಕಲಂ 143, 147, 148 ಸಹವಾಚಕ ಕಲಂ 149 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧಗಳನ್ನು ಮಾಡಿರುತ್ತೀರಿ, ಅದು ನನ್ನ ಸಂಜ್ಞೆತೆಗೆ ಬಂದಿರುತ್ತದೆ.

ಎರಡನೆಯದಾಗಿ ಮೇಲೆ ಹೇಳಲಾದ ದಿನ ಸಮಯ ಮತ್ತು ಸ್ಥಳದಲ್ಲಿ ಆರೋಪಿತರು ತಮ್ಮ ಏಕೋದ್ದೇಶವನ್ನು ಈಡೇರಿಸಿಕೊಳ್ಳುವುದರ ಸಲುವಾಗಿ ಆರೋಪಿ 3,4,5,6,7 ನೇದ್ದವರು ಕೂಡಿ ಚಾಸಾ 1 ನೇದ್ದವನ ಎಡಗಲ್ಲಕ್ಕೆ ಎಡಗ್ಣಿನ ಮೇಲೆ, ಭುಜಕ್ಕೆ ಹೊಟ್ಟೆಗೆ , ಎದೆಗೆ ಎಲ್ಲರೂ ಕೂಡಿ ಕೈಯಿಂದ ಹೊಡೆದು ಗುಪ್ತಗಾಯ ಪಡಿಸಿರುತ್ತಾರೆ, ಆ ಮೂಲಕ ಆರೋಪಿತರಾದ ನೀವು ಭಾ.ದಂ.ಸಂ. 323 ಸಹವಾಚಕ ಕಲಂ 149 ರಡಿಯಲ್ಲಿ ಶಿಕ್ಷಾರ್ಹ ಅಪರಾಧಗಳನ್ನು ಮಾಡಿರುತ್ತೀರಿ, ಅದು ನನ್ನ ಸಂಜ್ಞೆತೆಗೆ ಬಂದಿರುತ್ತದೆ.

ಮೂರನೆಯದಾಗಿ ಮೇಲೆ ಹೇಳಲಾದ ದಿನ ಸಮಯ ಮತ್ತು ಸ್ಥಳದಲ್ಲಿ ಆರೋಪಿತರೆಲ್ಲರೂ ಏಕೋದ್ದೇಶದಿಂದ ಅಕ್ರಮಕೂಟ ರಚಿಸಿಕೊಂಡು ಬಂದು ಜಗಳವನ್ನು ಬಿಡಿಸಲು ಬಂದ ಚಾಸಾ 4 ನೇದ್ದವನಿಗೆ ಅರೋಪಿ 4 ನೇದ್ದವನು ಕಲ್ಲಿನಿಂದ ಚಾಸಾ 4 ನೇದ್ದವನ ಬಲಹಣೆಗೆ ಹೊಡೆದು ರಕ್ತಗಾಯ ಪಡಿಸಿರುತ್ತಾನೆ ಆ ಮೂಲಕ ಆರೋಪಿತರಾದ ನೀವು ಭಾ.ದಂ.ಸಂ. 324 ಸಹವಾಚಕ ಕಲಂ 149 ರಡಿಯಲ್ಲಿ ಶಿಕ್ಷಾರ್ಹ ಅಪರಾಧಗಳನ್ನು ಮಾಡಿರುತ್ತೀರಿ, ಅದು ನನ್ನ ಸಂಜ್ಞೆತೆಗೆ ಬಂದಿರುತ್ತದೆ.

ನಾಲ್ಕನೆಯದಾಗಿ ಮೇಲೆ ಹೇಳಲಾದ ದಿನ ಸಮಯ ಮತ್ತು ಸ್ಥಳದಲ್ಲಿ ಆರೋಪಿತರೆಲ್ಲರೂ ಏಕೋದ್ದೇಶದಿಂದ ಅಕ್ರಮಕೂಟ ರಚಿಸಿಕೊಂಡು ಬಂದು ಆರೋಪಿ ನಂ ಆರೋಪಿ ನಂ 1 ನೇದ್ದವನು ಚಾಸಾ ನಂ 1 ನೇದ್ದವನಿಗೆ ಅಲ್ಲಿಯೆ ಬಿದ್ದಿದ್ದ ಬಡಿಗೆಯನ್ನು ತೆಗೆದುಕೊಂಡು ಚಾಸಾ 1 ನೇದ್ದನ ತಲೆಯ ಮೇಲೆ ಹೊಡೆದು ಭಾರಿ ರಕ್ತಗಾಯಪಡಿಸಿದನು, ಮತ್ತು ಆರೋಪಿ 2 ನೇದ್ದವನು ಕಲ್ಲಿನಿಂದ ಚಾಸಾ 1 ನೇದ್ದವನಿಗೆ ಎಡ ಕಿವಿಗೆ ಹೊಡೆದು ಬಾರಿ ರಕ್ತಗಾಯ ಪಡಿಸಿದನು ಆ ಮೂಲಕ ಆರೋಪಿತರಾದ ನೀವು ಭಾ.ದಂ.ಸಂ. 326 ಸಹವಾಚಕ ಕಲಂ 149 ರಡಿಯಲ್ಲಿ ಶಿಕ್ಷಾರ್ಹ ಅಪರಾಧಗಳನ್ನು ಮಾಡಿರುತ್ತೀರಿ, ಅದು ನನ್ನ ಸಂಜ್ಞೆತೆಗೆ ಬಂದಿರುತ್ತದೆ.

ಐದನೆಯದಾಗಿ ಮೇಲೆ ಹೇಳಲಾದ ದಿನ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರಾದ ನೀವು ಏಕೋದ್ದೇಶದಿಂದ ಅಕ್ರಮಕೂಟ ರಚಿಸಿಕೊಂಡು ಬಂದು ಆರೋಪಿ 1 ನೆದ್ದವನು ಚಾಸಾ 1 ನೇದ್ದವನಿಗೆ ಜಗಳ ತೆಗೆದು ಈಗ ಒಂದು ವರ್ಷಗಳ ಹಿಂದೆ ನನಗೆ ಏಕೆ ಜಗಳ ಮಾಡಿದ್ದಿ ಸೂಳೆಮಗನೆ , ಅಬ್ ತುಮಾರಾ ಸಾಮನೆ ಆಯಾ ಹು ಕ್ಯಾ ಕರ ಲೇ ತೂ ಕರಲೆ ಅಂತಾ ಅವಾಚ್ಯ ಶಬ್ದಗಳಿಂದ ಬೈದು ಸಾರ್ವಜನಿಕ ಶಾಂತತೆಗೆ ಭಂಗ ಉಂಟು ಮಾಡಿದ್ದು ಆ ಮೂಲಕ ಆರೋಪಿತರಾದ ನೀವು ಭಾ.ದಂ.ಸಂ.504 ಸಹವಾಚಕ ಕಲಂ 149 ರಡಿಯಲ್ಲಿ ಶಿಕ್ಷಾರ್ಹ ಅಪರಾಧಗಳನ್ನು ಮಾಡಿರುತ್ತೀರಿ, ಅದು ನನ್ನ ಸಂಜ್ಞೆತೆಗೆ ಬಂದಿರುತ್ತದೆ.

ಕೊನೆಯದಾಗಿ ಮೇಲೆ ಹೇಳಲಾದ ದಿನ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರಾದ ನೀವು ಏಕೋದ್ದೇಶದಿಂದ ಅಕ್ರಮಕೂಟ ರಚಿಸಿಕೊಂಡು ಬಂದು ಆರೋಪಿ 8 ನೇದ್ದವನು ಏ ಸಾಲೊಂಕೋ ಮತ್ ಚೋಡೋ ಆಜ ಖಲ್ಲಾಸ ಕರದೋ ಅಂತಾ ಜೀವದ ಭಯ ಹಾಕಿರುತ್ತಾರೆ, ಆ ಮೂಲಕ ಆರೋಪಿತರಾದ ನೀವು ಭಾ.ದಂ.ಸಂ.506 ಸಹವಾಚಕ ಕಲಂ 149 ರಡಿಯಲ್ಲಿ ಶಿಕ್ಷಾರ್ಹ ಅಪರಾಧಗಳನ್ನು ಮಾಡಿರುತ್ತೀರಿ, ಅದು ನನ್ನ ಸಂಜ್ಞೆತೆಗೆ ಬಂದಿರುತ್ತದೆ.

ಕಾರಣ ಮೇಲೆ ಹೇಳಿದ ಅಪರಾಧಗಳಿಗಾಗಿ ವಿಚಾರಣೆ ಎದುರಿಸಬೇಕೆಂದು ನಿರ್ದೇಶಿಸುತ್ತಿದ್ದೇನೆ.

ಸಹಿ/-

ದಿನಾಂಕಃ 23-10-2024 ಪ್ರ.ದ.ನ್ಯಾದಂ. ಸೇಡಂ.

## ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಸೇಡಂ.

**ಸಿಸಿ ನಂ.1824/2022**

ಫಿರ್ಯಾದಿಃ ಕರ್ನಾಟಕ ಸರಕಾರ ಪರಃ ಸೇಡಂ ಪೊಲೀಸ್ ಠಾಣೆ,

-ಃಃ ವಿರುದ್ಧ ಃಃ-

ಆರೋಪಿ ನಂಃ 1. ವಸೀಮ ತಂದೆ ಸೈಯದ ನಸೀರ
ವಃ 32 ವರ್ಷ, ಉಃ ಹೋಟೇಲ ಕೆಲಸ,
ಸಾಃ ರಹಮತ ನಗರ ಸೇಡಂ ,
ತಾಃ ಸೇಡಂ, ಜಿಃ ಕಲಬುರಗಿ ಹಾಗೂ ಇತರರು .

### ಆರೋಪಿತರ ಹೇಳಿಕೆ

ಪ್ರಃ-1) ಈ ಓದಿ ಹೇಳಲಾದ ದೋಷಾರೋಪಣೆಯನ್ನು ಕೇಳಿ ತಿಳಿದುಕೊಂಡಿರುವಿರಾ?

ಉಃ- ಆ-1 ಆ-2

ಆ-3 ಆ-4

ಆ-5 ಆ-6

ಆ-7 ಆ-8

ಪ್ರಃ-2) ನಿಮ್ಮ ತಪ್ಪನ್ನು ಒಪ್ಪಿಕೊಳ್ಳುತ್ತಿರೊ ಅಥವಾ ವಿಚಾರಣೆ ನಡೆಯಬೇಕಾ?

ಉಃ- ಆ-1 ಆ-2

ಆ-3 ಆ-4

ಆ-5 ಆ-6

ಆ-7 ಆ-8

(ದೋಷಾರೋಪಣೆಯನ್ನು ಆರೋಪಿತರಿಗೆ ಓದಿ ಹೇಳಿದ್ದು, ಅವರು ನೀಡಿದ ಹೇಳಿಕೆಯನ್ನು ಯಥಾವತ್ತಾಗಿ ದಾಖಲಿಸಿದ್ದು, ಅದು ಸಂಪೂರ್ಣ ಸತ್ಯವಾಗಿರುತ್ತದೆಂದು ಪ್ರಮಾಣೀಕರಿಸುತ್ತೇನೆ)

ಸಹಿ/-

ದಿನಾಂಕಃ 23-10-2024 ಪ್ರ.ದ.ನ್ಯಾದಂ. ಸೇಡಂ.